ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು –01

ಪ್ರಸ್ತಾವನೆ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಟ್ಯಾರಿಫ್ ಆದೇಶ 2015 ರಲ್ಲಿ ಎನರ್ಜಿ ಆಡಿಟ್ ಮಾಡಲು ಹಾಗೂ ವಾಣಿಜ್ಯ ನಷ್ಟವನ್ನು ತಡೆಗಟ್ಟಿ ನಿಖರವಾದ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆಯನ್ನು ನಿರ್ಧಾರ ಮಾಡಲು ಸೂಚಿಸಿತ್ತು. ಆಯೋಗವು ಹಲವು ಬಾರಿ ಎನರ್ಜಿ ಆಡಿಟ್ ಮಾಡಲು ಸೂಚಿಸಿದ್ದರೂ, ಈ ಬಗ್ಗೆ ಪೂರ್ತಿಯಾಗಿ ಯಾವುದೇ ಕ್ರಮಗಳನ್ನು ಬೆವಿಕಂ ತೆಗೆದುಕೊಂಡಿಲ್ಲವೆಂದು ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಆರ್ಥಿಕ ವರ್ಷ –2016 ಕ್ಕೆ ನೀರಾವರಿ ಪಂಪ್‌ಸೆಟ್ ಬಳಕೆದಾರರಿಗೆ ನೀಡಲಾದ ಉಚಿತ ವಿದ್ಯುತ್ ಸರಬರಾಜಿಗಾಗಿ ನೀಡಲಾಗುವ ರೂ. 1,338.81 ಕೋಟಿ ಅನುದಾನ ದಲ್ಲಿ ಶೇಕಡ 10 ರಷ್ಟನ್ನು ಎನರ್ಜಿ ಆಡಿಟ್ ವರದಿ ಸಲ್ಲಿಸುವವರೆಗೂ ತಡೆಹಿಡಿಯಲು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಹೀಗಾಗಿ ರೂ. 133.88 ಕೋಟಿಗಳ ಅನುದಾನವನ್ನು ರಾಜ್ಯಸರ್ಕಾರ ತಡೆಹಿಡಿದಿದೆ.

ಆದ್ದರಿಂದ ಬೆವಿಕಂ ಕಂಪನಿಯ ಎಲ್ಲಾ ವಿದ್ಯುತ್ ವಿತರಣಾ ಪರಿವರ್ತಕ ಕೇಂದ್ರಗಳಿಂದ ಪ್ರತಿ ತಿಂಗಳು ಸರಬರಾಜಾದ ವಿದ್ಯುತ್‌ನ್ನು ಆ ಪರಿವರ್ತಕಕ್ಕೆ ಸಂಬಂಧಪಟ್ಟ ಗ್ರಾಹಕರಿಂದ ಬಳಕೆಯಾದ ವಿದ್ಯುತ್‌ನೊಂದಿಗೆ ತಾಳೆ ಮಾಡಿ ಎನರ್ಜಿ ಆಡಿಟ್ ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ಡಿಸೆಂಬರ್ 2015 ರ ರೊಳಗೆ ಪೂರ್ತಿಮಾಡಲು ಸೂಚಿಸಲಾಗಿದೆ ಮತ್ತು ಪ್ರತಿ ತಿಂಗಳ ಪ್ರಾರಂಭಿಕ ದಿನಾಂಕದಿಂದ ಎಲ್ಲಾ ಫೀಡರ್‌ಗಳ ಮೀಟರ್ ರೀಡಿಂಗ್ ಪಡೆದು ಫೀಡರ್ ವೈಸ್ ವಿದ್ಯುತ್ ಬಳಕೆಯನ್ನು ಕ್ರೋಢೀಕರಿಸಿ ಎನರ್ಜಿ ಆಡಿಟ್ ಮಾಡಲು ಸೂಚಿಸಿದೆ. ಈ ರೀತಿಯ ಎಲ್ಲಾ ಫೀಡರ್‌ಗಳ ಎನರ್ಜಿ ಆಡಿಟ್ ಆದ ನಂತರವೇ ಉಳಿದ ಶೇಕಡ 10 ರಷ್ಟು ಸಹಾಯಧನ ರೂ. 133.88 ಕೋಟಿ ಹಣವನ್ನು ರಾಜ್ಯ ಸರ್ಕಾರದಿಂದ ಪಡೆಯಬಹುದಾಗಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಬೆವಿಕಂ/ಬಿಸಿ31/2581/2014–15/602** **ದಿನಾಂಕ: 03 DEC 2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಾನುಸಾರ, ಬೆವಿಕಂ ವ್ಯಾಪ್ತಿಯ ವಿದ್ಯುತ್ ಪರಿವರ್ತಕ ಕೇಂದ್ರಗಳ ಮತ್ತು ಫೀಡರ್‌ಗಳ ಎನರ್ಜಿ ಆಡಿಟ್‌ನ್ನು ಸಂಬಂಧಪಟ್ಟ ಅಧಿಕಾರಿಗಳು ಡಿಸೆಂಬರ್ 2015 ರ ಅಂತ್ಯಕ್ಕೆ ಪೂರ್ಣಗೊಳಿಸಿ ವರದಿಯನ್ನು ಪ್ರಧಾನ ವ್ಯವಸ್ಥಾಪಕರು(ಮಾಪಕ ಮತ್ತು ವಾಣಿಜ್ಯ), ಕಂಪನಿ ಕಾರ್ಯಾಲಯ ರವರಿಗೆ ಸಲ್ಲಿಸತಕ್ಕದ್ದು. ಪ್ರಧಾನ ವ್ಯವಸ್ಥಾಪಕರು(ಮಾಪಕ ಮತ್ತು ವಾಣಿಜ್ಯ) ರವರು ಸ್ವೀಕೃತಗೊಳ್ಳುವ ವರದಿಗಳನ್ನು ಪರಿಶೀಲಿಸಿ ಮುಂದಿನ ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಉಲ್ಲಂಘಿಸಿ ಎನರ್ಜಿ ಆಡಿಟ್ ಕಾರ್ಯಗಳನ್ನು ನಿಗಧಿತ ಸಮಯದಲ್ಲಿ ಕೈಗೊಳ್ಳದ/ಪೂರ್ಣಗೊಳಿಸದ ಅಧಿಕಾರಿಗಳ ವೇತನದಿಂದ ಸಹಾಯ ಧನಕ್ಕೆ ಸಮನಾದ ಮೊತ್ತವನ್ನು ಕಡಿತಗೊಳಿಸುವುದರೊಂದಿಗೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಎಚ್ಚರಿಸಲಾಗಿದೆ.

ಆದೇಶದ ಮೇರೆಗೆ,

3/12/15

**(ಜಿ. ಅನುರಾಧ, ಕೆ.ಎ.ಎಸ್)**
**ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)**
**ಬೆ.ವಿ.ಕಂ., ಬೆಂಗಳೂರು**

**ಪ್ರತಿಗಳು:-**

1. ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನೆ, ಬೆವಿಕಂ.,
3. ಪ್ರಧಾನ ವ್ಯವಸ್ಥಾಪಕರು(ಮಾಪಕ ಮತ್ತು ವಾಣಿಜ್ಯ), ಕಾರ್ಯಾಲಯ, ಬೆವಿಕಂ., ಬೆಂಗಳೂರು.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ಬೆವಿಕಂ.,
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆವಿಕಂ.,
6. ಪೊಲೀಸ್ ಅಧಿಕ್ಷಕರು, ಜಾಗೃತದಳ, ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು.
7. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.,
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಬೆವಿಕಂ.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಬೆವಿಕಂ.
10. ಆಪ್ತ ಕಾರ್ಯದರ್ಶಿಗಳು: ವ್ಯ(ನಿ)/ನಿ(ತಾ)/ನಿ(ಹ), ಕಂಪನಿ ಕಾರ್ಯಾಲಯ, ಬೆವಿಕಂ., ಬೆಂಗಳೂರು
11. ಮುಖ್ಯ ಕಡತ.